**ಓ ಎಸ್ 99/2023 ಪಿಡಬ್ಲ್ಯೂ.4**

**ಸಾಕ್ಷಿಯನ್ನು ದಿಃ 20.11.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಜೆ ಪಿ ರವರಿಂದಃ**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ವಾದಿಯು ನನಗೆ ಸುಮಾರು 25 - 30 ವರ್ಷಗಳಿಂದ ಪರಿಚಯ. ಅವರು ನಮ್ಮ ಪಕ್ಕದ ಗ್ರಾಮದವರಾಗಿದ್ದು ಜಮೀನಿನ ಬಳಿ ಹೋಗುವಾಗ ಮತ್ತು ಬರುವಾಗ ನನಗೆ ಪರಿಚಯವಾಗಿದ್ದಾರೆ. ವಾದಿಯ ಜಮೀನಿನ ಪೂರ್ವ ಭಾಗದಲ್ಲಿ ನಮ್ಮ ಜಮೀನು ಇದೆ.

ನಿಂಗಮ್ಮ ಯಾರು ಎಂದು ನನಗೆ ಗೊತ್ತಿಲ್ಲ. ವಾದಿಯು ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿರುವ ಸಂಬಂಧ ಕೈ ಬರಹದ ಆರ್ ಟಿ ಸಿ ಮತ್ತು ಸಾಗುವಳಿ ಚೀಟಿ ನೋಡಿದ್ದೇನೆ. 2002 ರಿಂದ ಇಚೆಗೆ ಬರುತ್ತಿರುವ ಕಂಪ್ಯೂಟರ್ ಆರ್ ಟಿ ಸಿ ಯನ್ನು ನಾನು ನೋಡಿಲ್ಲ. ದಾವಾ ಷೆಡ್ಯೂಲ್ ಸರ್ವೆ ನಂಬರ್ ಆಸ್ತಿಯು ಸರ್ಕಾರಿ ಜಮೀನು ಆಗಿದ್ದು ಅದರಲ್ಲಿ ಅರಣ್ಯ ಇಲಾಖೆಯವರು ಗಿಡ ಮರ ನೆಟ್ಟು ಸ್ವಾಧೀನಾನುಭವ ಹೊಂದಿದ್ದರೂ ಸಹ ವಾದಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸರ್ಕಾರಿ ಆಸ್ತಿಯಾಗಿದ್ದರೂ ಸಹ ಅದನ್ನು ಲಪಟಾಯಿಸಲು ನಾನು ಹಾಗೂ ವಾದಿ ಸೇರಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅರಣ್ಯ ಇಲಾಖೆಯವರು ವಾದಿಯ ಮೇಲೆ ಕೇಸು ಹಾಕಿರುವ ಸಂಗತಿ ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಸಾ ಓ ಹೇ ಸ ಒ

(ಬಾಬು ಎನ್)

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,

ಪಾಂಡವಪುರ